

ಪರಿಚಯ ಮಾಡಿಕೊಂಡ . ’ಊರಾನ ಆಟ ಮುಗದ ಮ್ಯಾಲ ನಮ್ಮ ತ್ವಾಟಕ್ಕ ಬರ್ರೀ. ಒಂದ ಆಟ ಆಡಿ, ಹೋಗುವಾಗ ಕುರಿಮರಿ ಮತ್ತ ಒಂದ ಪಿಸವಿ ಗೋದಿ ತುಗೊಂಡ ಹೋಗಿರೆಂತ’ ಅಂತಾ ಹೇಳಿದಾ. ಮತ್ತ ತನ್ನ ತ್ವಾಟದ ದಾರಿ ಬರೋಬ್ಬರಿ ಗುರುತಾ ಹೇಳಿದಾ. ’ಪಂಚಾಯ್ತಿಗಿ ಹೋಗಿ ಬರ್ತೇನಿ, ನೀವು ಊರ ಸುತ್ತಿ ಸಂಜಿಮುಂದ ಬರ್ರಿ’ ಎಂದು ಹೇಳಿ ಪಂಚಾಯ್ತಿಗೆ ಬಂದಾ.

ಸೆಕ್ರೆಟರಿ ಸಾಹೇಬಗ ಭೇಟಿಯಾಗಿ ಬಾಕಿ ಬಿರಾಡ ತುಂಬಿ ಖುಲ್ಲಾ ಆದಾ. ಚಂದ್ರ ಸಾಲಿಗಿ ಬರುದ್ರೊಳಗ ಬಹಿರೂಪಗಾರ ಮಂದೀ ಊರ ಸುತ್ತಾಕ ಹೋಗಿದ್ರು. ಮತ್ತ ಗಂಗಪ್ಪನ ಸೆರೆದ ಅಂಗಡಿಗೆ ಹೋಗಿ ಅರ್ಧ ಆಗಿದ್ದ ನಿಶೆ ಪೂರ್ಣ ಮಾಡಿಕೊಂಡ. ನಿಶೆದಾಗ ಸೀತಾಳ ಸಾಮೀಪ್ಯ ಕಲ್ಪಿಸಿಕೊಂಡು ಕವಿರತ್ನ ಕಾಳಿದಾಸ ಪಿಕ್ಚರ್ ಒಳಗಿನ ಪ್ರಿಯತಮೆ..ಓ..ಓ.. ಪ್ರಿಯತಮೆ ಹಾಡ ಹಾಡಕೋತ ಊರ ಹೊರಗ ಮೈಲ ದೂರವಿರೋ ತನ್ನ ತ್ವಾಟಕ್ಕ ಬಂದಾ. ಗೆಣಸಿಗಿ ನೀರ ಉಣಿಸಿದಾ, ಬಾಳೆ ಗಿಡದಾನ ಕಸಾ ಕೀಳತಿದ್ದ ಆಳ ಮನಿಷ್ಯಾರಿಗಿ ಝುಬರಿಸಿ ದೌಡ ದೌಡ ಕೆಲಸಾ ಮಾಡ್ರಿ ಅಂತಾ ಎಚ್ಚರಿಕಿ ಕೊಟ್ಟು ಮಧ್ಯಾನದ ಊಟಾ ಬಡಿದು ಅಡ್ಡ ಆದಾ. ಕನಸಿನಾಗ ಸೀತಾ ಬಂದ್ಹಾಂಗ ಆಗಿ ಪ್ರೇಮಲೋಕದ ಎಲ್ಲಾ ಹಾಡ ಹಾಡಿದಾ.

ತಡಾಕಿಲ್ಲದ ಸಂಜೀ ಆಯ್ತು. ಹೇಳಿ ಕಳಿಸಿದ್ಹಾಂಗ ಬಹಿರೂಪಗಾರ ಮಂದಿ, ತಮ್ಮ ಸಕಲ ವಾದ್ಯಗಳೊಂದಿಗೆ ಬಾಳುಕುನ ತ್ವಾಟದ ಕಡೆಗೆ ಬಂದರು. ರಾಮಾಯಣ ಕಾಲದಿಂದ ನೇರವಾಗಿ ಧರೆಗಿಳಿದು ಭೂಮಿಗೆ ಅವತರಿಸಿದಂತಿದ್ದ ಈ ಬಹಿರೂಪಗಾರರನ್ನು ಕಂಡ ತ್ವಾಟದ ಶ್ವಾನ ಪಡೆಗಳು ಮುಗಿಲು ಹಾರುವ ಹಾಂಗ ಚೀರಿ ಇಡೀ ವಾತಾವರಣವನ್ನು ಅಲ್ಲೋಲಕಲ್ಲೋಲ ಮಾಡಿದವು. ಬಾಳುಕನ ಆಳ ಮನಿಷ್ಯಾ ಹಚ್ಯಾ ಹಚ್ಯಾ ಅನ್ನುತ್ತಾ ಶ್ವಾನ ಪಡೆಯನ್ನು ದೂರ ಅಟ್ಟಿ, ಎಲ್ಲ ಪಾತ್ರಧಾರಿಗಳನ್ನು ತ್ವಾಟದ ಮನೆಗೆ ಎಂಟ್ರಿ ಕೊಡಿಸಿದ.

ಸಂಜೆ ಹೊತ್ತಿಗೆ ಬಾಳುಕುನ ನಿಶೆ ಇಳಿದು